ದೊರೆತ ಸಿಂಹಕಟಾಂಜನ ಶಾಸನಕ್ಕೆ ದೊರಕಿಸುವ ಪ್ರಯತ್ನ ನಡೆದಿದೆ. ಕಾಲದ ಕಾರಣದಿಂದ ಮೊದಲನೆಯದು ತಾಗರ್ತಿಅಗ್ರಹಾರದ ತಾಮ್ರಶಾಸನ. ಪ್ರಸ್ತುತ ಸಂಪುಟಗಳ ಪ್ರಕಾರ ಹಲ್ಮಿಡಿ ಶಾಸನದ ಸ್ಥಾನ ಮೂರನೆಯದು.

ಪ್ರಸ್ತುತ 7ನೇ ಸಂಪುಟದಲ್ಲಿ ಪ್ರಕಟವಾಗಿರುವ ಈ ಸರಣಿಯ ಕೊನೆಯ ಶಾಸನದ ಕಾಲ ಕ್ರಿ.ಶ.ಸು.10ನೇ ಶತಮಾನ. ಮೊದಲ ಸಹಸ್ರಮಾನದ ನಮೂದಾಗಿರುವ ಶಾಸನಗಳ ಸಂಖ್ಯೆ 2,024 +. ಪ್ರದಾನ ಸಂಖ್ಯೆ 2,024. ಆದರೆ, ಆವರಣದಲ್ಲಿರುವ ಸಂಖ್ಯೆ 236(ಅ). ಆವರಣದಲ್ಲಿರುವ ಉಪಸಂಖ್ಯೆಗಳನ್ನೂ ಪರಿಗಣಿಸಿದಾಗ ಮೊದಲ ಸಹಸ್ರಮಾನದ ಒಟ್ಟು ಶಾಸನಗಳ ಸಂಖ್ಯೆಯು 2,300ನ್ನು ದಾಟುವ ಸೂಚನೆಗಳಿವೆ. ಮೊದಲ ಸಹಸ್ರಮಾನದಲ್ಲೇ ದಾಖಲಾದ ಕನ್ನಡ ಶಾಸನಗಳ ಸಂಖ್ಯೆ 2,300ನ್ನು ದಾಟುತ್ತದೆ. ಇದರಿಂದ ಕನ್ನಡ ಭಾಷೆ ಮತ್ತು ಲಿಪಿಯ ಸಂಖ್ಯಾವಾರು ಶ್ರೀಮಂತಿಕೆಯನ್ನು ತಿಳಿಯಬಹುದು; ಇವುಗಳ ಗಂಭೀರ ಅಧ್ಯಯನದಿಂದ ಕನ್ನಡ ಭಾಷಾ ಶ್ರೀಮಂತಿಕೆಯ ಪರಿಚಯವೂ ಆಗುತ್ತದೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಶೆಟ್ಟರ್ ಅವರು ಪರಿಗಣಿಸಿರುವುದು ಶಾಸನಗಳಲ್ಲಿನ ಕೇವಲ ಕನ್ನಡ ಪಠ್ಯದ ಭಾಗವನ್ನು; ಸಂಸ್ಕೃತ ಅಥವಾ ಮತ್ತಾವುದೇ ಭಾಷೆಯ ಜೊತೆಗಿನ ಶಾಸನಗಳಲ್ಲಿಯೂ ಕನ್ನಡ ಪಠ್ಯದ ಭಾಗವನ್ನು ಮಾತ್ರ ಆಯ್ದುಕೊಳ್ಳಲಾಗಿದೆ.

ಪ್ರತಿ ಸಂಪುಟದ ಕೊನೆಗೆ ಆಯಾ ಸಂಪುಟಗಳಲ್ಲಿ ಪ್ರಕಟವಾಗಿರುವ ಶಾಸನಗಳ 'ಪದಸೂಚಿ'ಯನ್ನು ನೀಡಲಾಗಿದೆ. ಅಲ್ಲೇ ಅವು ಯಾವ ಭಾಷಾಮೂಲಕ್ಕೆ ಸೇರಿವೆ ಎಂಬುದನ್ನೂ ಸೂಚಿಸಲಾಗಿದೆ. ಎಂಟನೆಯ ಸಂಪುಟದಲ್ಲಿ ಒಟ್ಟಾಗಿರುವ 'ಪದಸೂಚಿ' ಇದ್ದು, ಇವುಗಳನ್ನು ಬಳಸಿಕೊಂಡು ಶಬ್ದಕೋಶವೊಂದನ್ನು ಸಿದ್ಧಪಡಿಸುವ ಅವಕಾಶಗಳಿವೆ. ಈ ಬಗ್ಗೆ ಶೆಟ್ಟರ್ ಅವರು ಮೊದಲ ಸಂಪುಟಕ್ಕೆ ಬರೆದಿರುವ 'ಮೊದಲ ಮಾತು'ವಿನಲ್ಲೇ ಸ್ಪಷ್ಟ ಸೂಚನೆಗಳನ್ನು ನೀಡಿದ್ದಾರೆ.

ಪ್ರತಿ ಶಾಸನದ ಪಠ್ಯದ ಪದಚ್ಛೇದ ನೀಡುವಾಗಲೇ, ಅವುಗಳ ಅರ್ಥವನ್ನು ವರ್ತಮಾನದ ಕನ್ನಡದಲ್ಲಿ ನೀಡಲಾಗಿದೆ. ಇವುಗಳನ್ನೆಲ್ಲಾ ಆಧರಿಸಿ ಸಿದ್ಧವಾಗಬಹುದಾದ ನಿಘಂಟು ಬಹಳ ಉಪಯುಕ್ತವಾಗುತ್ತದೆ. ಈ ಸಂಪುಟಗಳಿಗೆ ಪೂರಕವಾಗಿ ಎನ್ನುವಂತೆ, ಇಲ್ಲಿ ಸಂಗ್ರಹಿಸಲಾಗಿರುವ ಶಾಸನಗಳ ಅಧ್ಯಯನ ಮಾಡಿ, ವಿಚಾರ ಸಂಕಿರಣವೊಂದನ್ನು ಹಮ್ಮಿಕೊಂಡು, ಶಾಸನಗಳಲ್ಲಿ ಉಕ್ತವಾಗಿರುವ ವಿಷಯಗಳನ್ನು ಆಧರಿಸಿ, ವಿದ್ವಾಂಸರು ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ವಿಚಾರಗಳನ್ನು ಪ್ರಬಂಧ ರೂಪದಲ್ಲಿ ಮಂಡಿಸಲು ಕೋರಲಾಗಿತ್ತು. ಹಾಗೆ ಮಂಡಿತವಾದ 35 ಪ್ರಬಂಧಗಳನ್ನು ಸಂಗ್ರಹಿಸಿ, ಸಂಪಾದಿಸಿ 'ಹಳಗನ್ನಡ: ಭಾಷೆ, ಭಾಷಾವಿಕಾಸ, ಭಾಷಾ ಬಾಂಧವ್ಯ' ಎಂಬ ಗ್ರಂಥವನ್ನು ಪ್ರಕಟಿಸಲಾಗಿದೆ. ಶೆಟ್ಟರ್ ಅವರು ತಮ್ಮ 'ಮೊದಲ ಮಾತು'ವಿನಲ್ಲಿ ತಿಳಿಸಿದಂತೆಯೇ ಈ ಗ್ರಂಥವು ಮೊದಲ ಸಹಸ್ರಮಾನದ ಕನ್ನಡ ಶಾಸನಗಳ ಎಂಟು ಸಂಪುಟಕ್ಕೆ ಬರೆದ ಮುನ್ನುಡಿ. ಅದರಲ್ಲೇ, ಈ ಸಂಪುಟಗಳಿಂದ ಮುಂದೆ ಆಗಬಹುದಾದ ಉಪಯೋಗ ಮಾಡಬಹುದಾದ ಅಗಾಧ ಕೆಲಸಗಳು ಇತ್ಯಾದಿಗಳ ಬಗ್ಗೆ ಮನವರಿಕೆ ಮಾಡಿದ್ದಾರೆ. ಈ ಸಂಪುಟಗಳ ಕೆಲಸಕ್ಕೆ ಶೆಟ್ಟರ್ ಅವರು ತಮ್ಮ ಜೀವಮಾನದ ಕೊನೆಯ ವರ್ಷಗಳನ್ನು ಇಡಿಯಾಗಿ ವಿನಿಯೋಗಿಸಿದರು. ಗಳಿಸಿದ್ದ ಅಪಾರ ವಿದ್ವತ್ತು ಮತ್ತು ಭಾಷಾ ಪ್ರೌಢಿಮೆಗಳು ಇನ್ನೂ ಅದೆಷ್ಟೋ ಕೆಲಸಗಳನ್ನು ಹಮ್ಮಿಕೊಳ್ಳಲು ಸಿದ್ಧವಾಗುತ್ತಿದ್ದುದನ್ನು ಅವರ ಬರವಣಿಗೆಯನ್ನು ಗಮನಿಸುತ್ತಿದ್ದವರು ತಿಳಿಯಬಹುದಾಗಿತ್ತು.

ಈ ಸಂಪುಟಗಳಲ್ಲಿನ ಶಾಸನಗಳನ್ನು ಬಳಸಿಕೊಂಡು, ಹಳಗನ್ನಡ ನಿಘಂಟು ಮಾತ್ರವಲ್ಲದೆ ತುರುಗೋಳ್, ನೆತ್ತರಕೊಡುಗೆ ಇತ್ಯಾದಿ ಪಾರಿಭಾಷಿಕ ಶಬ್ದಗಳು ಮತ್ತು ಅವುಗಳಿಗೆ ಸಂಬಂಧಿಸಿದ ಮತ್ತಷ್ಟು ವಿಚಾರಗಳನ್ನು ಕಾಲಾನುಕ್ರಮಣಿಕೆಯಲ್ಲಿ ಪರಿಶೀಲಿಸುವ ಅವಕಾಶಗಳಿವೆ. ಒಟ್ಟಾರೆ 'ಮೊದಲ ಸಹಸ್ರಮಾನದ ಕನ್ನಡ ಶಾಸನಗಳು' ಸಂಪುಟವು ದೀರ್ಘ ಕಾಲದ ತಪಸ್ಸಿನ ಫಲವಾಗಿದ್ದು, ಕನ್ನಡ ಶಾಸನಾಭ್ಯಾಸಿಗಳು ಈ ಕೆಲಸಕ್ಕೆ ನೆರವಾದ ಸಂಸ್ಥೆಗಳು, ಸಂಪಾದಕರು, ಅವರಿಗೆ ನೆರವಾದವರು, ಮುದ್ರಕರು ಮತ್ತು ಪ್ರಕಾಶಕರಿಗೆ ಕೃತಜ್ಞರಾಗಿರುತ್ತಾರೆ.

●